**All India Radio: Bangalore**
**National Bulletin In Kannada**
**16.01.2026  19.35 hrs**

ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು

ಮುಖ್ಯಾಂಶಗಳು

೧. ಪ್ರಧಾನಿ ನರೇಂದ್ರ ಮೋದಿ ಅವರಿಂದ ನಾಳೆ ಪಶ್ಚಿಮ ಬಂಗಾಳದ ಮಾಲ್ಡಾ ರೈಲು ನಿಲ್ದಾಣದಲ್ಲಿ ದೇಶದ ಮೊಟ್ಟಮೊದಲ 'ವಂದೇ ಭಾರತ್ ಸ್ಲೀಪರ್' ರೈಲು ಸೇವೆ ಲೋಕಾರ್ಪಣೆ

೨. ನವೋದ್ಯಮ ಪರಿಸರ ಹೊಂದಿದ ವಿಶ್ವದ ಮೂರನೇ ಅತಿ ದೊಡ್ಡ ದೇಶವಾಗಿ ಹೊರಹೊಮ್ಮಿದ ಭಾರತ- ಪ್ರಧಾನಿ ನರೇಂದ್ರ ಮೋದಿ

೩. ಮಾದಕದ್ರುವ್ಯ ಸಾಗಾಟ; ಜಾರಿ ನಿರ್ದೇಶನಾಲಯದಿಂದ ದೇಶದ ೨೬ ಸ್ಥಳಗಳಲ್ಲಿ ಶೋಧಕಾರ್ಯ

೪. ಡಬ್ಲ್ಯೂಪಿಎಲ್ ಟಿ-೨೦ ಕ್ರಿಕೆಟ್; ರಾಯಲ್ ಚಾಲೆಂಜರ್ಸ್ ವಿರುದ್ಧ ಟಾಸ್ ಗೆದ್ದ ಗುಜರಾತ್ ಜೈಂಟ್ಸ್ ಫೀಲ್ಡಿಂಗ್ ಆಯ್ಕೆ

**<>><><*><><<>**

ಪ್ರಧಾನಿ ನರೇಂದ್ರ ಮೋದಿ ಪಶ್ಚಿಮ ಬಂಗಾಳ ಮತ್ತು ಅಸ್ಸಾಂ ರಾಜ್ಯಗಳಿಗೆ ನಾಳೆಯಿಂದ ೨ ದಿನಗಳ ಕಾಲ ಭೇಟಿ ನೀಡಲಿದ್ದಾರೆ. ತಮ್ಮ ಪ್ರವಾಸದ ಮೊದಲನೇ ದಿನ ಪ್ರಧಾನಿ ಅವರು, ಪಶ್ಚಿಮ ಬಂಗಾಳದ ಮಾಲ್ಡಾ ನಗರ ರೈಲು ನಿಲ್ದಾಣದಲ್ಲಿ ಹೌರಾ ಮತ್ತು ಗುವಾಹಟಿಯ ಕಾಮಾಕ್ಯ ನಡುವಿನ ದೇಶದ ಮೊಟ್ಟಮೊದಲ 'ವಂದೇ ಭಾರತ್ ಸ್ಲೀಪರ್' ರೈಲು ಸಂಚಾರಕ್ಕೆ ಹಸಿರು ನಿಶಾನೆ ತೋರಿಸಲಿದ್ದಾರೆ. ದೇಶದ ಹೆಚ್ಚುತ್ತಿರುವ ಆಧುನಿಕ ಸಾರಿಗೆ ಅಗತ್ಯವನ್ನು ಪೂರೈಸಲು ಅಭಿವೃದ್ಧಿಪಡಿಸಲಾಗಿರುವ 'ವಂದೇ ಭಾರತ್ ಸ್ಲೀಪರ್' ರೈಲು ಸಂಪೂರ್ಣ ಹವಾ ನಿಯಂತ್ರಿತವಾಗಿದೆ. ಪ್ರಯಾಣಿಕರಿಗೆ ಮಿತ ವೆಚ್ಚದಲ್ಲಿ ವಿಮಾನ ಪ್ರಯಾಣದಂತಹ ಅನುಭವ ನೀಡುತ್ತದೆ. ಈ ರೈಲು, ದೂರದ ಪ್ರಯಾಣವನ್ನು ವೇಗವಾಗಿ ಸುರಕ್ಷಿತವಾಗಿ ಹಾಗೂ ಹೆಚ್ಚು ಅನುಕೂಲಕರವಾಗಿಸುತ್ತದೆ. ಬಳಿಕ ಪ್ರಧಾನಿ ಅವರು, ಮಾಲ್ಡಾದಲ್ಲಿ ನಡೆಯಲಿರುವ ಸಾರ್ವಜನಿಕ ಸಮಾರಂಭದಲ್ಲಿ ೩ ಸಾವಿರ ೨೫೦ ಕೋಟಿ ರೂಪಾಯಿಗೂ ಅಧಿಕ ವೆಚ್ಚದ ವಿವಿಧ ರೈಲ್ವೆ ಮತ್ತು ರಸ್ತೆ ಮೂಲಸೌಕರ್ಯ ಯೋಜನೆಗಳಿಗೆ ಶಂಕುಸ್ಥಾಪನೆ ನೆರವೇರಿಸಲಿದ್ದಾರೆ. ಇದಲ್ಲದೆ, ಪಶ್ಚಿಮ ಬಂಗಾಳದ ನಾಲ್ಕು ಬೃಹತ್ ರೈಲ್ವೆ ಯೋಜನೆಗಳಿಗೂ ಶಿಲಾನ್ಯಾಸ ನೆರವೇರಿಸಲಿದ್ದಾರೆ. ಬಲೂರ್ ಘಾಟ್ ಮತ್ತು ಹಿಲಿ ನಡುವಿನ ಹೊಸ ರೈಲು ಮಾರ್ಗ ನ್ಯೂ ಜಲಪಾಯಿಗುರಿಯಲ್ಲಿ ಮುಂದಿನ ತಲೆಮಾರಿನ ಸಾಗಾಟ ನಿರ್ವಹಣಾ ವ್ಯವಸ್ಥೆ ಸಿಲಿಗುರಿ ಲೋಕೋಶೆಡ್‌ನ ಮೇಲ್ದರ್ಜೆಗೇರಿಸುವ ಕೆಲಸ ಹಾಗೂ ಜಲಪಾಯಿಗುರಿ ಜಿಲ್ಲೆಯಲ್ಲಿ  ವಂದೇ ಭಾರತ್ ರೈಲು ನಿರ್ವಹಣಾ ಸೌಕರ್ಯದ ಆಧುನೀಕರಣದ ಕಾಮಗಾರಿ ಇವುಗಳಲ್ಲಿ ಸೇರಿವೆ. ಈ ಸೌಕರ್ಯಗಳು ಉತ್ತರ ಬಂಗಾಳದ ಪ್ರದೇಶದಲ್ಲಿ ಪ್ರಯಾಣಿಕ ಹಾಗೂ ಸರಕು ಸಾಗಾಟ ವ್ಯವಸ್ಥೆಯನ್ನು ಬಲಪಡಿಸಲಿದ್ದು, ಉದ್ಯೋಗ ಅವಕಾಶವನ್ನು ಸೃಷ್ಟಿಸಲಿವೆ. ಪ್ರಧಾನಿ ಅವರು ಇದೇ ಸಂದರ್ಭದಲ್ಲಿ ಮಾಲ್ಡಾದಿಂದ ನಾಲ್ಕು ಹೊಸ ಅಮೃತ್ ಭಾರತ್ ಎಕ್ಸ್‌ಪ್ರೆಸ್ ರೈಲುಗಳ ಸಂಚಾರಕ್ಕೂ ವರ್ಚುವಲ್ ಮೂಲಕ ಹಸಿರು ನಿಶಾನೆ ತೋರಿಸಲಿದ್ದಾರೆ. ಬಳಿಕ ಪ್ರಧಾನಿ ಅವರು, ಅಸ್ಸಾಂ ಗುವಾಹಟಿಯಲ್ಲಿ ಬೋಡೊ ಸಮುದಾಯದ ಶ್ರೀಮಂತ ಪರಂಪರೆಯನ್ನು ಬಿಂಬಿಸುವ ಬಗುರಂಬಾ ದ್ವೋಹವ್-೨೦೨೬ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ. ಕಾರ್ಯಕ್ರಮದಲ್ಲಿ ಬೋಡೋ ಸಮುದಾಯದ ೧೦ ಸಾವಿರಕ್ಕೂ ಅಧಿಕ ಕಲಾವಿದರು ಬಗುರಂಬಾ ನೃತ್ಯವನ್ನು ಸಾದರಪಡಿಸಲಿದ್ದಾರೆ. ಪ್ರಧಾನಿ ಅವರು ತಮ್ಮ ಎರಡನೇ ದಿವಸದ ಕಾರ್ಯಕ್ರಮದಲ್ಲಿ ಅಸ್ಸಾಂನ ಕಾಲಿಯಾಬೊರ್‌ನಲ್ಲಿ ಸುಮಾರು ೬ ಸಾವಿರದ ೯೫೦ ಕೋಟಿ ರೂಪಾಯಿ ವೆಚ್ಚದಲ್ಲಿ ನಿರ್ಮಿಸಲಾಗುವ ಕಾಜಿರಂಗ ಮೇಲು ಕಾರಿಡಾರ್ ಯೋಜನೆಗೆ ಭೂಮಿ ಪೂಜೆ ನೆರವೇರಿಸಲಿದ್ದಾರೆ.  ಈ ಸಂದರ್ಭದಲ್ಲಿ ಅವರು ಗುವಾಹಟಿ-ರೋಹ್‌ಟಕ್ ಹಾಗೂ ದಿಬ್ರುಗಢ್-ಲಖನೌ ನಡುವಿನ ಎರಡು ಹೊಸ ಅಮೃತಭಾರತ್ ಎಕ್ಸ್‌ಪ್ರೆಸ್ ರೈಲು ಸಂಚಾರ ಉದ್ಘಾಟಿಸಲಿದ್ದಾರೆ. ನಂತರ, ಪಶ್ಚಿಮ ಬಂಗಾಳದ ಹೂಗ್ಲಿಯ ಸಿಂಗೂರ್‌ಗೆ ಭೇಟಿ ನೀಡಿ, ೮೩೦ ಕೋಟಿ ರೂಪಾಯಿಗೂ ಅಧಿಕ ವೆಚ್ಚದ ವಿವಿಧ ಅಭಿವೃದ್ಧಿ ಕಾಮಗಾರಿಗಳ ಉದ್ಘಾಟನೆ, ಶಂಕುಸ್ಥಾಪನೆ ನೆರವೇರಿಸಲಿದ್ದಾರೆ. ಪ್ರಧಾನಿ ಅವರು, ಬಾಲ್‌ಗಢದಲ್ಲಿ ಒಳನಾಡು ಜಲಸಾರಿಗೆ ನಿಲ್ದಾಣ ಮತ್ತು ರಸ್ತೆ ಮೇಲು ಸೇತುವೆ ಸೇರಿದಂತೆ ವಿಸ್ತರಿತ ಬಂದರು ಗೇಟ್ ವ್ಯವಸ್ಥೆಗೆ ಅಡಿಗಲ್ಲು ಇರಿಸಲಿದ್ದಾರೆ. ಹಾಕಲಿದ್ದಾರೆ ಹಾಗೂ ಕೊಲ್ಕತ್ತಾದಿಂದ ವಿವಿಧ ರಾಜ್ಯಗಳಿಗೆ ತೆರಳುವ ಮೂರು ಹೊಸ ಅಮೃತ್ ಭಾರತ್ ಎಕ್ಸ್‌ಪ್ರೆಸ್ ರೈಲು ಸಂಚಾರಕ್ಕೆ ಚಾಲನೆ ನೀಡಲಿದ್ದಾರೆ.

**<>><><*><><<>**

ಸ್ಟಾರ್ಟ್‌ಅಪ್ ಇಂಡಿಯಾ ಮಿಷನ್ ಕಳೆದ ಹತ್ತು ವರ್ಷಗಳಲ್ಲಿ ದೇಶಾದ್ಯಂತ ಕ್ರಾಂತಿಯನ್ನುಂಟು ಮಾಡಿದ್ದು, ಹೊಸ ಸಂಸ್ಕೃತಿಯನ್ನು ಸೃಷ್ಟಿಸಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ಅವರು ನವದೆಹಲಿಯಲ್ಲಿಂದು ರಾಷ್ಟ್ರೀಯ ನವೋದ್ಯಮ ದಿನದ ಅಂಗವಾಗಿ ಏರ್ಪಡಿಸಲಾಗಿದ್ದ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿ, ಭಾರತ,

ನವೋದ್ಯಮ ಪರಿಸರ ಹೊಂದಿದ ವಿಶ್ವದ ಮೂರನೇ ಅತಿ ದೊಡ್ಡ ದೇಶವಾಗಿ ಹೊರಹೊಮ್ಮಿದೆ. ದೇಶದ ಯುವಜನತೆ ನೈಜ ಸಮಸ್ಯೆಗಳನ್ನು ಪರಿಹರಿಸುವತ್ತ ಗಮನ ಕೇಂದ್ರೀಕರಿಸುತ್ತಿದೆ ಎಂದರು. ಒಂದು ದಶಕದ ಹಿಂದೆ ೫೦೦ಕ್ಕೂ ಕಡಿಮೆ ಸ್ಟಾರ್ಟ್‌ಅಪ್‌ಗಳು ಇದ್ದವು, ಪ್ರಸ್ತುತ ಈ ಸಂಖ್ಯೆ ಎರಡು ಲಕ್ಷ ಗಡಿ ದಾಟಿದೆ. ೨೦೧೪ರಲ್ಲಿ ಭಾರತ ಕೇವಲ ನಾಲ್ಕು ಯೂನಿಕಾರ್ನ್ ನವೋದ್ಯಮಗಳನ್ನು ಹೊಂದಿತ್ತು. ಈಗ ಅದು ೧೨೫ ಸಕ್ರಿಯ ಯೂನಿಕಾರ್ನ್‌ಗಳನ್ನು ಹೊಂದಿದ್ದು, ವಿಶ್ವದ ಗಮನ ಸೆಳೆದಿದೆ ಎಂದು ತಿಳಿಸಿದರು. ದೇಶದಲ್ಲಿನ ಶೇಕಡಾ ೪೫ಕ್ಕೂ ಅಧಿಕ ನವೋದ್ಯಮಗಳು ಕನಿಷ್ಠ ಓರ್ವ ಮಹಿಳಾ ನಿರ್ದೇಶಕರು ಅಥವಾ ಪಾಲುದಾರರನ್ನು ಹೊಂದಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.

<>><><*><><<>

ಭಾರತದ ಡೀಪ್‌ಟೆಕ್ ಸ್ಟಾರ್ಟ್‌ಅಪ್ ಪರಿಸರ ವ್ಯವಸ್ಥೆ ವಿಸ್ತಾರಗೊಳ್ಳುತ್ತಿದೆ ಎಂದು ಕೇಂದ್ರ ವಿದ್ಯುನ್ಮಾನ ಮತ್ತು ಮಾಹಿತಿ ತಂತ್ರಜ್ಞಾನ ಸಚಿವ ಅಶ್ವಿನಿ ವೈಷ್ಣವ್ ತಿಳಿಸಿದ್ದಾರೆ. ಭಾರತದ ಶೇಕಡಾ ೮೦ ರಷ್ಟು ನವೋದ್ಯಮಗಳು ಕೃತಕಬುದ್ಧಿಮತ್ತೆ ಆಧರಿಸಿವೆ ಎಂದು ಸಾಮಾಜಿಕ ಮಾಧ್ಯಮದಲ್ಲಿ ಅವರು ತಿಳಿಸಿದ್ದಾರೆ.

<>><><*><><<>

ಜಾರಿ ನಿರ್ದೇಶನಾಲಯ ದೇಶದ ವಿವಿಧ ೨೬ ಸ್ಥಳಗಳಲ್ಲಿ ಇಂದು ಶೋಧಕಾರ್ಯ ನಡೆಸಿದೆ. ಗೋವಾ, ಮಹಾರಾಷ್ಟ್ರ, ಕೇರಳ, ತಮಿಳುನಾಡು, ಕರ್ನಾಟಕ, ಒಡಿಶಾ ಮತ್ತು ದೆಹಲಿಗಳಲ್ಲಿ ಅಕ್ರಮ ಅಂತಾರಾಷ್ಟ್ರೀಯ ಮಾದಕ ದ್ರವ್ಯ ಸಾಗಾಟ ಹಾಗೂ ಹಣ ಬಳಕೆಗೆ ಸಂಬಂಧಿಸಿದಂತೆ ಈ ಶೋಧ ಕಾರ್ಯ ಕೈಗೊಳ್ಳಲಾಗಿದೆ ಎಂದು ಜಾರಿ ನಿರ್ದೇಶನಾಲಯದ ಪ್ರಕಟಣೆ ತಿಳಿಸಿದೆ. ಸುಸಂಘಟಿತ ಅಂತಾರಾಷ್ಟ್ರೀಯ ಮಾದಕದ್ರವ್ಯ ಜಾಲವನ್ನೂ ಕೂಡ ಪತ್ತೆಹಚ್ಚಲಾಗಿದೆ. ಈ ಎಲ್ಲಾ ರಾಜ್ಯಗಳಲ್ಲಿ ವ್ಯಾಪಾರ-ವ್ಯಾಪಾರದ ಆಧಾರದ ಮೇಲೆ ಮಾದಕದ್ರವ್ಯ ವಹಿವಾಟು ನಡೆದಿರುವುದು ಕಂಡುಬಂದಿದೆ. ಅಪಾರ ಪ್ರಮಾಣದ ಮಾದಕದ್ರವ್ಯ ಹಾಗೂ ನಗದು ದಾಖಲೆಗಳನ್ನು ಮತ್ತು ಡಿಜಿಟಲ್ ಉಪಕರಣಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಜಾರಿ ನಿರ್ದೇಶನಾಲಯದ ಪ್ರಕಟಣೆ ತಿಳಿಸಿದೆ.

<>><><*><><<>

ಆರ್ಥಿಕ ಸೂಚ್ಯಂಕಗಳ ಮಾಪನಕ್ಕೆ ಅಗತ್ಯವಿರುವ ಮೂಲಾಧಾರ ವರ್ಷ ಪರಿಷ್ಕರಣೆ ಕೈಗೊಳ್ಳಲು ಸಾಂಖಿಕ ಮತ್ತು ಕಾರ್ಯಕ್ರಮ ಜಾರಿ ಸಚಿವಾಲಯ ಸಿದ್ಧಗೊಳ್ಳುತ್ತಿದೆ. ಸಚಿವಾಲಯದ ಕಾರ್ಯದರ್ಶಿ ಸೌರವ್ ಗಾರ್ಗ್ ಆಕಾಶವಾಣಿ ಸುದ್ದಿವಿಭಾಗಕ್ಕೆ ನೀಡಿದ ವಿಶೇಷ ಸಂದರ್ಶನದಲ್ಲಿ ಈ ವಿಷಯ ತಿಳಿಸಿದ್ದಾರೆ. ಎಲ್ಲಾ ಆರ್ಥಿಕ ಸೂಚ್ಯಂಕಗಳನ್ನು ನಿರ್ಧರಿಸುವಲ್ಲಿ ಮೂಲವರ್ಷ ಪ್ರಮುಖ ಪಾತ್ರ ವಹಿಸುತ್ತದೆ. ಕಳೆದ ಹತ್ತು ವರ್ಷಗಳಲ್ಲಿ ಭಾರತ ಆರ್ಥಿಕತೆ ಬೃಹತ್ ವಿನ್ಯಾಸಾತ್ಮಕ ಬದಲಾವಣೆ ಕಂಡಿದೆ. ಜಿಎಸ್‌ಟಿ ಹಾಗೂ ವ್ಯಾಪಕ ಅಂಕೀಕರಣಗಳ ಹಿನ್ನೆಲೆಯಲ್ಲಿ ಪರಿಷ್ಕರಣೆ ಅಗತ್ಯವಾಗಿದೆ. ಮೂಲವರ್ಷವನ್ನು ೨೦೧೧-೧೨ ರಿಂದ ೨೦೨೨-೨೩ ಕ್ಕೆ ಸಕಾಲಿಕಗೊಳಿಸಲಾಗುವುದು ಎಂದು ಕಾರ್ಯದರ್ಶಿ ಸೌರವ್ ಗಾರ್ಗ್ ತಿಳಿಸಿದ್ದಾರೆ.

<>><><*><><<>

ಮಹಾರಾಷ್ಟ್ರ ಮುನ್ಸಿಪಲ್ ಕಾರ್ಪೊರೇಷನ್ ಚುನಾವಣೆಯಲ್ಲಿ ಬಿಜೆಪಿ ಮತ್ತು ಶಿವಸೇನಾ ಮೈತ್ರಿಕೂಟ ಜಯಗಳಿಸಿರುವುದು ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ ಸರ್ಕಾರ ನೀತಿ ಬಗ್ಗೆ ಜನರು ತೋರಿದ ವಿಶ್ವಾಸವಾಗಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದ್ದಾರೆ. ಇದು ಮಹಾರಾಷ್ಟ್ರದಲ್ಲಿ ಮಹಾಯುತಿ ಸರ್ಕಾರದ ಸಾಧನೆಗೆ ಜನರು ನೀಡಿದ ಮನ್ನಣೆಯಾಗಿದೆ ಎಂದು ತಿಳಿಸಿದ್ದಾರೆ.

<>><><*><><<>

ಇರಾನ್ ವಿದ್ಯಮಾನವನ್ನು ಭಾರತ ನಿಕಟವಾಗಿ ಪರಿಶೀಲಿಸುತ್ತಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ವಕ್ತಾರ ರಣಧೀರ್ ಜೈಸ್ವಾಲ್ ತಿಳಿಸಿದ್ದಾರೆ. ಅಲ್ಲಿನ ಭಾರತೀಯ ನಾಗರಿಕ ಹಿತಸಂರಕ್ಷಣೆಗೆ ಅಗತ್ಯವಿರುವ ಕ್ರಮಕೈಗೊಳ್ಳಲು ಭಾರತ ಬದ್ಧವಿದೆ ಎಂದು ಅವರು ತಿಳಿಸಿದ್ದಾರೆ.

<>><><*><><<>

ಭಾರತ ಜಪಾನ್ ನಡುವಿನ ಆರ್ಥಿಕ ಸಂಬಂಧ ಕಳೆದ ಎರಡು ದಶಕಗಳಲ್ಲಿ ಸಮಗ್ರ ಮತ್ತು ಕಾರ್ಯತಂತ್ರ ಸಹಭಾಗಿತ್ವವಾಗಿ ರೂಪಾಂತರಗೊಂಡಿದೆ ಎಂದು ವಿದೇಶಾಂಗ ವ್ಯವಹಾರಗಳ ಖಾತೆ ಸಚಿವ ಡಾ.ಎಸ್.ಜೈಶಂಕರ್ ಹೇಳಿದ್ದಾರೆ. ಅವರು ನವದೆಹಲಿಯಲ್ಲಿ ಜಪಾನ್‌ನ ವಿದೇಶಾಂಗ ಖಾತೆ ಸಚಿವ ತೋಷಿಮಿಟ್‌ಸು ಮೊಟೆಗಿ ಅವರೊಂದಿಗೆ ನಡೆಸಿದರು.  ಈ ಮಾತುಕತೆಯ ಪ್ರಾಸ್ತಾವಿಕ ಭಾಷಣದಲ್ಲಿ ಡಾ.ಎಸ್.ಜೈಶಂಕರ್, ಉಭಯ ದೇಶಗಳು, ಇಂಧನ, ಆರೋಗ್ಯ, ಸಮುದ್ರಯಾನ ಭದ್ರತೆ ಕ್ಷೇತ್ರಗಳಲ್ಲಿ ಸಹಕಾರ ಪ್ರಮುಖ ಖನಿಜಗಳು ಪೂರೈಕೆ ಸರಪಳಿ ಸೇರಿದಂತೆ ದ್ವಿಪಕ್ಷೀಯ ಹಿತಾಸಕ್ತಿಯ ವಿಷಯಗಳ ಬಗ್ಗೆ ಚರ್ಚಿಸಲು ಉಭಯ ದೇಶಗಳು ಉತ್ಸುಕವಾಗಿವೆ ಎಂದು ತಿಳಿಸಿದರು.

<>><><*><><<>

ಭಾರತ ಮತ್ತು ಜರ್ಮನಿ ದೂರಸಂಪರ್ಕದಲ್ಲಿನ ಸಹಕಾರಕ್ಕಾಗಿ ಜಂಟಿ ಘೋಷಣೆ ಇಂಗಿತಕ್ಕೆ ಸಹಿ ಹಾಕಿವೆ. ದೂರಸಂಪರ್ಕ ಮತ್ತು ಮಾಹಿತಿ, ಸಂವಹನ ಹಾಗೂ ತಂತ್ರಜ್ಞಾನ ಕ್ಷೇತ್ರಗಳಲ್ಲಿನ ಉತ್ತಮ ಅಭ್ಯಾಸಗಳನ್ನು

ನಿಯಮಿತವಾಗಿ ವಿನಿಮಯ ಮಾಡಿಕೊಳ್ಳುವ ಸಹಕಾರ ಹೆಚ್ಚಿಸಲು ಉಭಯ ದೇಶಗಳು ಒಪ್ಪಿವೆ ಎಂದು ಸಂಪರ್ಕ ಸಚಿವಾಲಯ ತಿಳಿಸಿದೆ. ಜರ್ಮನಿಯ ಫೆಡರಲ್ ಚಾನ್ಸಲರ್ ಫ್ರೆಡ್ರಿಕ್ ಮೆರ್ಜ್ ಅವರ ಇತ್ತೀಚಿನ ಭಾರತ ಭೇಟಿ ಸಂದರ್ಭದಲ್ಲಿ ಈ ಘೋಷಣೆಗೆ ಅಂಕಿತ ಹಾಕಲಾಗಿದೆ.

**<>><><*><><<>**

ಇ-ಕಾಮರ್ಸ್ ವೇದಿಕೆಗಳ ಮೂಲಕ ಅನಧಿಕೃತವಾಗಿ ವಾಕಿಟಾಕಿ ಮಾರಾಟ ಮಾಡುವವರ ವಿರುದ್ಧ ಕೇಂದ್ರೀಯ ಗ್ರಾಹಕ ಹಿತರಕ್ಷಣಾ ಪ್ರಾಧಿಕಾರ ಸ್ವಪ್ರೇರಿತ ಕ್ರಮ ತೆಗೆದುಕೊಂಡಿದೆ. ನಿಯಮಾವಳಿಯ ಉಲ್ಲಂಘನೆ ಹಾಗೂ ತಪ್ಪು ಮಾಹಿತಿ ನೀಡುವ ಜಾಹಿರಾತು ಕುರಿತಂತೆ ಕೇಂದ್ರೀಯ ಗ್ರಾಹಕ ಹಿತರಕ್ಷಣಾ ಪ್ರಾಧಿಕಾರ ವಿವಿಧ ಪ್ರಮುಖ ಆನ್‌ಲೈನ್ ಮಾರುಕಟ್ಟೆ ತಾಣಗಳಿಗೆ ದಂಡ ವಿಧಿಸಿದೆ. ಇ-ಕಾಮರ್ಸ್ ವೇದಿಕೆಯಲ್ಲಿ ೧೬ ಸಾವಿರದ ೯೦೦ ಅನುಸರಣಾರಹಿತ ವಾಕಿಟಾಕಿಗಳನ್ನು ಗುರುತಿಸಲಾಗಿದೆ ಹಾಗೂ ಈ ವೇದಿಕೆಗಳಿಗೆ ಹತ್ತು ಲಕ್ಷ ರೂಪಾಯಿ ದಂಡ ವಿಧಿಸಲಾಗಿದೆ ಎಂದು ಪ್ರಾಧಿಕಾರ ತಿಳಿಸಿದೆ.

**<>><><*><><<>**

ಬಿಜೆಪಿ ಪಕ್ಷದ ರಾಷ್ಟ್ರೀಯ ಅಧ್ಯಕ್ಷರ ಚುನಾವಣಾ ವೇಳಾಪಟ್ಟಿ ಪ್ರಕಟಿಸಲಾಗಿದೆ. ನಾಮಪತ್ರ ಸಲ್ಲಿಕೆ ಹಾಗೂ ಪರಿಶೀಲನೆ ಇದೇ ೧೯ ರಂದು ನಡೆಯಲಿದೆ. ೨೦ ರಂದು ಚುನಾವಣೆ ಜರುಗಲಿದೆ.

**<>><><*><><<>**

ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ನವದೆಹಲಿಯ ಸಂಸತ್ ಭವನದಲ್ಲಿಂದು ಯುನಿಟೆಡ್ ಕಿಂಗ್‌ಡಮ್‌ನ ಹೌಸ್ ಆಫ್ ಲಾರ್ಡ್ಸ್ ಅಲ್‌ಕ್ಲುತ್ ಸ್ಪೀಕರ್ ಲಾರ್ಡ್ ಮೆಕ್‌ಫಾಲ್ ಅವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದರು. ನವದೆಹಲಿಯಲ್ಲಿ ನಡೆದಿರುವ ಕಾಮನ್‌ವೆಲ್ತ್ ಸ್ಪೀಕರ್ ಹಾಗೂ ಪೀಠಾಸೀನಾಧಿಕಾರಿಗಳ ೨೮ ಅಧಿವೇಶನದ ಹಿನ್ನೆಲೆಯಲ್ಲಿ ಈ ಮಾತುಕತೆ ನಡೆಯಿತು. ಯುಕೆ ಸ್ಪೀಕರ್ ಅವರ ಭಾರತ ಭೇಟಿ ಉಭಯ ದೇಶಗಳ ಬಲವಾದ ಸಂಸದೀಯ ಸಂಬಂಧಗಳನ್ನು ವ್ಯಕ್ತಪಡಿಸುತ್ತದೆ ಎಂದು ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಸಂದರ್ಭದಲ್ಲಿ ಹೇಳಿದರು.

**<>><><*><><<>**

ನವಿ ಮುಂಬೈನ ಡಾ.ಡಿ.ವೈ.ಪಾಟೀಲ್ ಸ್ಪೋರ್ಟ್ಸ್ ಅಕಾಡೆಮಿ ಕ್ರೀಡಾಂಗಣದಲ್ಲಿ ಇಂದು ನಡೆಯುತ್ತಿರುವ ಡಬ್ಲ್ಯೂಪಿಎಲ್ ಟಿ-೨೦ ಮಹಿಳಾ ಕ್ರಿಕೆಟ್ ಪಂದ್ಯಾವಳಿಯ ೯ನೇ ಪಂದ್ಯದಲ್ಲಿ ಆರ್‌ಸಿಬಿ ಮತ್ತು ಗುಜರಾತ್ ಜೈಂಟ್ಸ್ ತಂಡಗಳು ಮುಖಾಮುಖಿಯಾಗಿವೆ. ಟಾಸ್ ಗೆದ್ದ ಗುಜರಾತ್ ಜೈಂಟ್ಸ್ ತಂಡ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿದೆ.

**<>><>< ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು ><><<>**

**<>><>< ನಮ್ಮ ಮುಂದಿನ ವಾರ್ತಾ ಪ್ರಸಾರ ನಾಳೆ ಬೆಳಗ್ಗೆ ೭.೦೫ ಕ್ಕೆ ><><<>**